# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **996**
**ವಿಧಾನ ಪರಿಷತ್ ಸದಸ್ಯರ ಹೆಸರು** : **ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ** : **12-03-2026**
**ಉತ್ತರಿಸುವ ಸಚಿವರು** : **ಮಾನ್ಯ ಗೃಹ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| **(ಅ)** | ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಮಂಜೂರಾಗಿರುವ ಅಧಿಕಾರಿ ಮತ್ತು ನೌಕರರ ಹುದ್ದೆಗಳೆಷ್ಟು; ಈ ಪೈಕಿ ಭರ್ತಿಯಾಗಿರುವ ಮತ್ತು ಖಾಲಿ ಇರುವ ಹುದ್ದೆಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಮಂಜೂರಾಗಿರುವ, ಭರ್ತಿಯಾಗಿರುವ ಮತ್ತು ಖಾಲಿ ಇರುವ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಲಾಗಿದೆ. |
| **(ಆ)** | ಅಗ್ನಿಶಾಮಕ ಇಲಾಖೆಯಲ್ಲಿ ಹಾಲಿ ಇರುವ ಅಧಿಕಾರಿ ಹಾಗೂ ಸಿಬ್ಬಂದಿಗಳ ಮರುವಿಂಗಡಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದರೆ ಯಾವ ಮಾನದಂಡಗಳನ್ನು ಆಧರಿಸಿ ಮರುವಿಂಗಡಣೆ ಮಾಡಲಾಗುವುದು; (ವಿವರ ಒದಗಿಸುವುದು) | ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಗ್ನಿಶಾಮಕ ಠಾಣೆಗಳು, ಅಗ್ನಿನಿಯಂತ್ರಣ ಘಟಕಗಳು, ತರಬೇತಿ ಕೇಂದ್ರ ಮತ್ತು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕಛೇರಿ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಕಛೇರಿ, ಮುಖ್ಯ ಅಗ್ನಿಶಾಮಕ ಅಧಿಕಾರಿ ಕಛೇರಿ ಹಾಗೂ ಕೇಂದ್ರ ಕಛೇರಿಗಳಲ್ಲಿ ಖಾಯಂ ಮುಂಜೂರಾಗಿರುವ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ಲಿಪಿಕ ಸಿಬ್ಬಂದಿಯ ಖಾಯಂ ವೃಂದಾವಾರು ಒಟ್ಟು 7313 ಹುದ್ದೆಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಏಕ ರೀತಿಯ ಸಂಖ್ಯಾಬಲ ಹೊಂದಲು ವೃಂದ ಬಲಾಬಲಗಳಲ್ಲಿ ಯಾವುದೇ ಹೆಚ್ಚಳವಿಲ್ಲದಂತೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 121 ಎಸ್‌ಎಫ್‌ಬಿ 2025, ದಿನಾಂಕ: 22-01-2026 ರಲ್ಲಿ ಈ ಕೆಳಕಂಡ ಮಾನದಂಡಗಳನ್ವಯ ಪುನರ್ ವಿಂಗಡಣೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ:-<br><br>1. ನಗರ / ಪಟ್ಟಣ ವ್ಯಾಪ್ತಿಯ ಭೌಗೋಳಿಕ ವ್ಯಾಪ್ತಿ,<br>2. ನಗರ/ ಪಟ್ಟಣಗಳ ಜನಸಂಖ್ಯೆ/ ಸಾಂದ್ರತೆ<br>3. ಕಳೆದ 10 ವರ್ಷಗಳಲ್ಲಿ ಅಗ್ನಿಶಾಮಕ ಠಾಣೆ ವ್ಯಾಪ್ತಿಯಲ್ಲಿ ಉಂಟಾದ ಅಗ್ನಿಕರೆಗಳು, |

| | | |
|---|---|---|
| | | ವಿಶೇಷ ಕರೆಗಳು ಇತ್ಯಾದಿ.<br>4. ಕೈಗಾರಿಕಾ ಪ್ರದೇಶಗಳು / ಹೋಬಳಿ ಪ್ರದೇಶಗಳ ಆಧಾರದ ಮೇರೆಗೆ.<br>5. ಠಾಣೆಯಿಂದ ಠಾಣೆಗೆ ಇರುವ ಅಂತರ.<br>6. ಇಲಾಖೆಯು ಪ್ರಾರಂಭವಾದ ದಿನಾಂಕದಿಂದ ಪ್ರಸ್ತುತವರೆಗಿನ ಠಾಣೆಗಳು / ಠಾಣೆಗಳ ವಾಸ್ತವ ಬಲಾಬಲ ಮಂಜೂರಾತಿ<br>7. ಪ್ರಸ್ತುತ ಸರ್ಕಾರದಿಂದ ನೂತನವಾಗಿ ಪ್ರಾರಂಭವಾಗುತ್ತಿರುವ ಠಾಣೆಗಳಿಗೆ ಮಂಜೂರಾತಿ ನೀಡುತ್ತಿರುವ ಬಲಾಬಲಗಳ ಆಧಾರದ ಮೇರೆಗೆ.<br>8. ತಾಲ್ಲೂಕುವಾರು /ಜಿಲ್ಲಾವಾರು/ನಗರಪಾಲಿಕೆವಾರು/ ಮಹಾನಗರ ಪಾಲಿಕೆವಾರು ಠಾಣೆಗಳಿಗೆ ಮಂಜೂರಾಗಿರುವ ವೃಂದವಾರು ಬಲಾಬಲಗಳಲ್ಲಿ ವ್ಯತ್ಯಾಸಗಳಿರುವುದರಿಂದ.<br>9. ತಂತ್ರಜ್ಞಾನಗಳ ಉನ್ನತೀಕರಣದಿಂದ ಇಲಾಖೆಯು ಆಧುನಿಕರಣ ಗೊಳ್ಳುತ್ತಿರುವುದರಿಂದ ತಾಲ್ಲೂಕುವಾರು/ ಜಿಲ್ಲಾವಾರು/ ನಗರ ಪಾಲಿಕೆವಾರು/ ಮಹಾನಗರ ಪಾಲಿಕೆವಾರು ಠಾಣೆಗಳಿಗೆ ಏಕರೂಪ ಸಿಬ್ಬಂದಿ ಮಂಜೂರಾತಿ ನೀಡುವ ಪ್ರಯುಕ್ತ ವೃಂದಗಳ ಬಲಾಬಲವನ್ನು ಏಕರೂಪಗೊಳಿಸಲಾಗಿದೆ. |
| (ಇ) | ಪೊಲೀಸರಿಗೆ ಪ್ರತಿ ತಿಂಗಳು ರೂ.3000/- ಕಷ್ಟ ಪರಿಹಾರ ಭತ್ಯೆ ನೀಡುತ್ತಿದ್ದು, ಅದೇ ರೀತಿ ಅಗ್ನಿಶಾಮಕ ಸಿಬ್ಬಂದಿಗಳಿಗೆ ನೀಡುತ್ತಿರುವ ಕಷ್ಟ ಪರಿಹಾರ ಭತ್ಯೆಯನ್ನು ರೂ.3000/- ಗಳಿಗೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದರೆ ಯಾವಾಗ ಹೆಚ್ಚಿಲಾಗುವುದು? | ಅಗ್ನಿಶಾಮಕ ಸಿಬ್ಬಂದಿಗಳಿಗೆ ನೀಡುತ್ತಿರುವ ಕಷ್ಟ ಪರಿಹಾರ ಭತ್ಯೆಯನ್ನು ರೂ.3000/- ಗಳಿಗೆ ಹೆಚ್ಚಿಸುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರಿ ನೌಕರರಿಗೆ ಲಭ್ಯವಿರುವ ವಿವಿಧ ಭತ್ಯೆಗಳನ್ನು ಪರಿಷ್ಕರಿಸುವ ಕುರಿತು ಸರ್ಕಾರದ ಅಂತಿಮ ನಿರ್ಧಾರವನ್ನು ನಿರೀಕ್ಷಿಸಬಹುದಾಗಿದೆ ಎಂದು ತಿಳಿಸಿರುತ್ತದೆ. |

**ಸಂಖ್ಯೆ: ಹೆಚ್‌ಡಿ 54 ಎಸ್‌ಎಫ್‌ಬಿ 2026**

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**

## ಅನುಬಂಧ

## ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಮಂಜೂರಾದ, ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ (ದಿನಾಂಕ: 01-02-2026 ಕ್ಕೆ) ಈ ಕೆಳಕಂಡಂತಿದೆ:-

| ಕ್ರ. ಸಂ. | ಜಿಲ್ಲೆಯ ಹೆಸರು | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1. | ಬೆಂಗಳೂರು ನಗರ | 1417 | 960 | 457 |
| 2. | ಬೆಂಗಳೂರು ಗ್ರಾಮಾಂತರ | 144 | 88 | 56 |
| 3. | ಬಾಗಲಕೋಟೆ | 191 | 181 | 10 |
| 4. | ಬೆಳಗಾವಿ | 416 | 406 | 10 |
| 5. | ಬಳ್ಳಾರಿ | 135 | 109 | 26 |
| 6. | ಬೀದರ್ | 155 | 133 | 22 |
| 7. | ವಿಜಯಪುರ | 173 | 164 | 09 |
| 8. | ವಿಜಯನಗರ | 172 | 138 | 34 |
| 9. | ಚಾಮರಾಜನಗರ | 108 | 68 | 40 |
| 10. | ಚಿಕ್ಕಬಳ್ಳಾಪುರ | 162 | 76 | 86 |
| 11. | ಚಿಕ್ಕಮಗಳೂರು | 190 | 120 | 70 |
| 12. | ಚಿತ್ರದುರ್ಗ | 173 | 101 | 72 |
| 13. | ದಕ್ಷಿಣ ಕನ್ನಡ | 256 | 137 | 119 |
| 14. | ದಾವಣಗೆರೆ | 159 | 110 | 49 |
| 15. | ದಾರವಾಡ | 239 | 215 | 24 |
| 16. | ಗದಗ | 156 | 117 | 39 |
| 17. | ಕಲಬುರಗಿ | 212 | 187 | 25 |
| 18. | ಹಾಸನ | 209 | 131 | 78 |
| 19. | ಹಾವೇರಿ | 199 | 121 | 78 |
| 20. | ಕೊಡಗು | 115 | 58 | 57 |
| 21. | ಕೋಲಾರ | 160 | 77 | 83 |
| 22. | ಕೊಪ್ಪಳ | 160 | 148 | 12 |
| 23. | ಮಂಡ್ಯ | 191 | 108 | 83 |
| 24. | ಮೈಸೂರು | 344 | 234 | 110 |
| 25. | ರಾಯಚೂರು | 182 | 172 | 10 |
| 26. | ರಾಮನಗರ | 114 | 64 | 50 |
| 27. | ಶಿವಮೊಗ್ಗ | 206 | 139 | 67 |
| 28. | ತುಮಕೂರು | 294 | 176 | 118 |
| 29. | ಉಡುಪಿ | 137 | 77 | 60 |
| 30. | ಉತ್ತರ ಕನ್ನಡ | 279 | 193 | 86 |
| 31. | ಯಾದಗಿರಿ | 111 | 101 | 10 |
| ಒಟ್ಟು | | **7159** | **5109** | **2050** |